# ಕನ್ನಡ ಸಾಹಿತ್ಯದಲ್ಲಿ ಕೈವಲ್ಯದ ಪರಿಕಲ್ಪನೆ

**ಡಾ.ಹೆಚ್.ಮಲ್ಲಿಕಾರ್ಜುನ**
**ಮುಖ್ಯಸ್ಥರು**
**ಕನ್ನಡ ಅಧ್ಯಯನ ವಿಭಾಗ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೋಕ.**

ಕನ್ನಡ ಸಾಹಿತ್ಯ ಮತ್ತು ಧರ್ಮ ಇವೆರಡನ್ನು ಅವಲೋಕಿಸಿದಾಗ ಆರಂಭದಿಂದಲೂ ಕೂಡ ಕನ್ನಡ ಸಾಹಿತ್ಯ ಒಂದೊಂದು ಧರ್ಮದೊಂದಿಗೆ ಬೆರೆತು ಉತ್ತುಂಗ ಶಿಖರಕ್ಕೇರಿರುವುದನ್ನು ನಾವು ಕಾಣುತ್ತೇವೆ. ಬೌದ್ಧಸಾಹಿತ್ಯ– ಬೌದ್ಧಧರ್ಮ, ಜೈನ ಸಾಹಿತ್ಯ – ಜೈನ ಧರ್ಮ, ವಚನಸಾಹಿತ್ಯ–ವೀರಶೈವ ಧರ್ಮ, ದಾಸ ಸಾಹಿತ್ಯ –ವೈದಿಕ ಧರ್ಮಹೀಗೆಮೊದಲುಸಾಹಿತ್ಯ ಧಾರ್ಮಿಕಪರಿಕಲ್ಪನೆಯೊಂದಿಗೆಬೆರೆತು ರಚನೆಯಾಗಿರುವುದು ವೈಶಿಷ್ಟಪೂರ್ಣವಾಗಿದೆ. ಈ ಪರಂಪರೆ ಹೀಗೆ ಬೆಳೆಯುತ್ತಾ ಬಂದಿದೆ. ೧೫ನೇ ಶತಮಾನದಿಂದ ೧೯ನೇ ಶತಮಾನದವರೆಗಿನ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಎಲ್ಲಾ ಮತದ, ಎಲ್ಲಾ ರೀತಿಯ ಸಾಹಿತ್ಯ ಪ್ರಕಾರಗಳ ಕೃತಿಗಳ ರಚನೆಯು ವಿಶಿಷ್ಟವಾಗಿ ಕಂಡುಬರುತ್ತದೆ. ಒಂದು ರೀತಿ ಈ ಯುಗ ಎಲ್ಲಾ ಯುಗಗಳಿಗಿಂತ ಸಾಹಿತ್ಯ ದೃಷ್ಟಿಯಿಂದ ವಿಭಿನ್ನವಾಗಿದೆ. ಪ್ರಧಾನವಾಗಿ ದೇಸಿನಿಷ್ಟವಾದ ಸಾಹಿತ್ಯ ರಚನೆ ಇಲ್ಲಿ ಕಂಡುಬರುತ್ತದೆ. ಹಾಗೆಯೇ ೧೫ನೇ ಶತಮಾನದಿಂದ ೧೯ನೇ ಶತಮಾನದವರೆಗೆ ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟದಲ್ಲಿ ಒಂದು ಭಾಗವಾಗಿ ವಚನ ಸಾಹಿತ್ಯದ ನಂತರ ಮತ್ತೆ ವೀರಶೈವ ಸಾಹಿತ್ಯ – ಕೈವಲ್ಯಸಾಹಿತ್ಯ ಎಂಬ ಹೆಸರಿನಲ್ಲಿ ಮೈದಾಳಿರುವುದು ವಿಶಿಷ್ಟವಾದ ಸಂಗತಿಯಾಗಿದೆ. ಈ ಕೈವಲ್ಯ ಸಾಹಿತ್ಯದಲ್ಲಿ ಶಿವಶರಣರು ತತ್ವಪದಗಳನ್ನು ರಚಿಸುವುದರ ಮೂಲಕ ವೀರಶೈವ ಧರ್ಮದ ಹಲವು ಸಂದೇಶಗಳನ್ನು ನೀಡಿ ಮೆರೆದು ಮರೆಯಾದುದನ್ನು ಕಾಣಬಹುದು. “ವೀರಶೈವ ದರ್ಶನದಲ್ಲಿ ಪರವಸ್ತುವನ್ನು ಸ್ಥಲವೆಂದು ಕರೆಯುತ್ತಾರೆ. ‘ಸ್ಥ’ ಎಂಬ ಅಕ್ಷರ ಸ್ಥಾನವನ್ನು ಸೂಚಿಸುತ್ತದೆ. ‘ಲ’ ಎಂಬ ಅಕ್ಷರ ಲಯವನ್ನು ಸೂಚಿಸುತ್ತದೆ ಎಂಬ ಶಿವಾನುಭವ ಸೂತ್ರದಲ್ಲಿ ವಿವರಣೆ ಇದೆ”.

ಆದ್ದರಿಂದ ಸೃಷ್ಟಿ, ಸ್ಥಿತಿ, ಲಯಗಳಿಗೆ ಸಂಬಂಧಿಸಿದುದು ಸ್ಥಲವಾಗಿದೆ. ಭಕ್ತನೊಬ್ಬ ಸಂಸಾರದ ಸ್ಥಿತಿಯಿಂದ ಹಿಡಿದು ಆಧ್ಯಾತ್ಮಿಕ ಸಾಧನೆಯ ಮೂಲಕ ಪರಿನಿರ್ವಾಣ ಹೊಂದುವವರೆಗೆ, ಅಂತಿಮ ಹಂತ ತಲುಪುವವರೆಗಿನ ನಿರೂಪಣೆ ಈ ಸ್ಥಲಗಳಲ್ಲಿ ಕಂಡು ಬರುತ್ತದೆ. ಒಟ್ಟಾರೆ ಇಲ್ಲಿ ಬರುವ ಶರಣರ ಈ ಸ್ಥಲಗಳ ಅಧ್ಯಯನದಿಂದ ಗೋಚರವಾಗುವ ಅಂಶವೆಂದರೆ ಶಿವತತ್ವದ ನಿಲುವುಗಳನ್ನು ಸ್ಥಲತತ್ವಗಳಲ್ಲಿ ಅಡಗಿಸುವ ಕೆಲಸ ಮಾಡಿದ್ದಾರೆ. ವಚನ ಸಾಹಿತ್ಯ ಮತ್ತು ಕೈವಲ್ಯ ಸಾಹಿತ್ಯ ಎರಡೂ ವೀರಶೈವ ಧರ್ಮದ ಸಾಹಿತ್ಯದ ಘಟ್ಟಗಳೇ ಆದರೂ ಅಲ್ಲಲ್ಲಿ ಬರುವ ಶರಣರ ನಿಲುವುಗಳು ವಿಭಿನ್ನ ಮನೋಧರ್ಮಗಳಿಂದ ಕೂಡಿದೆ. ಷಟ್‌ಸ್ಥಲ ಎಂಬುದು ಮೇಲಿನ ಎರಡೂ ಘಟ್ಟಗಳಲ್ಲಿ ಕಂಡು ಬಂದರೂ ಅವುಗಳು ವಿಭಿನ್ನ ರೀತಿಯಲ್ಲಿ ಚಿತ್ರಣಗೊಂಡಿದೆ. ವಚನ ಸಾಹಿತ್ಯದಲ್ಲಿ ಷಟ್‌ಸ್ಥಲ ಪ್ರಧಾನವಾಗಿ ಕಂಡುಬರುತ್ತದೆ. ಜೀವಾತ್ಮನ ಸ್ಥಿತಿಯಿಂದ ಹಿಡಿದು ಪರಮಾತ್ಮನ ಸ್ಥಿತಿಯವರೆಗೆ ಸಾಮರಸ್ಯವನ್ನು ತರುವ ಫಲವಾಗಿ ಸ್ಥಲಗಳನ್ನು ದಾಟಿದರೆ ಮಾತ್ರ ಆತನಿಗೆ ದೈವಸಾಕ್ಷಾತ್ಕಾರವಾಗುವುದು ಕಂಡುಬರುತ್ತದೆ. ಇಲ್ಲಿ ಪ್ರಧಾನವಾಗಿ ಭಕ್ತಸ್ಥಲ, ಮಹೇಶಸ್ಥಲ, ಪ್ರಸಾಧಿಸ್ಥಲ, ಪ್ರಾಣಲಿಂಗಿ ಸ್ಥಲ, ಶರಣ ಸ್ಥಲ ಮತ್ತು ಐಕ್ಯಸ್ಥಲಗಳ ಮೂಲಕ ಸಾಮಾನ್ಯ ಮನುಷ್ಯನೊಬ್ಬ ಶಿವತತ್ವಗಳ ಮೂಲಕ ಅಸಾಮಾನ್ಯವಾದ ವ್ಯಕ್ತಿತ್ವವನ್ನು ಪಡೆಯಲು ಇವು ಮೆಟ್ಟಿಲುಗಳ ಹಾಗೆ ಕೆಲಸ ಮಾಡುತ್ತದೆ. ಇದರ ಮುಂದುವರೆದ ರೂಪವಾಗಿಯೇ ಕೈವಲ್ಯ ಸಾಹಿತ್ಯ ಕಂಡುಬರುತ್ತದೆ. ಅಲ್ಲಿಯೂ ಷಟ್‌ಸ್ಥಲ ಪರಿಕಲ್ಪನೆ ಕಂಡುಬರುತ್ತದೆ. ವಚನ ಸಾಹಿತ್ಯದ ಷಟ್‌ಸ್ಥಲಕ್ಕಿಂತ ಭಿನ್ನವಾದ ನಿಲುವುಗಳನ್ನು ಇಲ್ಲಿ ಬರುವ ಶರಣರು ತಾಳುತ್ತಾರೆ. ಕೈವಲ್ಯ ಸಾಹಿತ್ಯದಲ್ಲಿಯೂ ಕೂಡ ಪಂಚಸ್ಥಲಗಳು ಕಂಡುಬರುತ್ತದೆ. ಅವು ಪ್ರಮುಖವಾಗಿ ಶರಣರು ಶಿವನನ್ನು ಕಾಣಬೇಕಾದರೆ ಅನುಸರಿಸಬೇಕಾದ ಆಧ್ಯಾತ್ಮಿಕ ಮಾರ್ಗ ಹಾಗೂ ಮೆಟ್ಟಿಲುಗಳ ಹಾಗೆ ಕೆಲಸ ಮಾಡುತ್ತವೆ. ಪ್ರತಿಯೊಬ್ಬ ಶರಣನೂ ಕೂಡ ಶರಣಸತಿ ಭಾವದಿಂದ ಲಿಂಗಪತಿ ಭಾವದೆಡೆಗೆ ಸಾಗಿ ಅಂತಿಮವಾಗಿ ಐಕ್ಯ ಸ್ಥಿತಿಯವರೆಗೆ ತಲುಪುವ ಹಂತಗಳು ವಚನ ಸಾಹಿತ್ಯಕ್ಕಿಂತ ಭಿನ್ನರೀತಿಯಲ್ಲಿ ಕನ್ನಡ ಕೈವಲ್ಯ ಸಾಹಿತ್ಯದಲ್ಲಿ ಗೋಚರವಾಗುವುದನ್ನು ಕಾಣಬಹುದು. ಶಿವಕಾರುಣ್ಯ ಸ್ಥಲ, ಜೀವ ಸಂಭೋಧನಾ ಸ್ಥಲ, ನೀತಿ–ಕ್ರಿಯಾ–ಚರ್ಯಸ್ಥಲ, ಯೋಗ ಪ್ರತಿಪಾದನಾ ಸ್ಥಲ, ಜ್ಞಾನ ಪ್ರತಿಪಾದನಾ ಸ್ಥಲ ಈ ರೀತಿಯ ವಿವಿಧ ಹಂತಗಳ ಮೂಲಕ ಆಧ್ಯಾತ್ಮಿಕ ಸಾಧನೆಯ ಸಿದ್ಧಿಯ ಶಿಖರವನ್ನು ಏರುವ ಪ್ರಯತ್ನವನ್ನು ಶರಣರು ಮಾಡಿದರು.

"ಕೈವಲ್ಯ ಸಾಹಿತ್ಯ ಕೇವಲ ಭಾವುಕ ಭಕ್ತಿ ಪ್ರಧಾನವಾದ ಆವೇಗವಾಗಲಿ, ಸಾಮಾಜಿಕ ನೀತಿ ಪ್ರತಿಪಾದಕವಾದ ಉಪದೇಶವಾಗಲೀ ಅಲ್ಲ. ಇವುಗಳನ್ನು ಅರಗಿಸಿಕೊಂಡು ಅಂತರಂಗದೊಳಗೆ ಇಳಿಯುತ್ತಾ, ಆ ಮೂಲಕ ಶಿವಯೋಗಿ ಸಾಧನೆಯ ಶಿಖರವನ್ನು ಏರುತ್ತಾ ಹೋಗುವ ಅನುಭವಿಗಳ ಆಧ್ಯಾತ್ಮ ಗೀತೆಗಳು" ಎನ್ನುತ್ತಾರೆ. ಶಿವಕಾರುಣ್ಯ ಸ್ಥಲ ಸಾಂಸಾರಿಕ ಜೀವನ, ಐಹಿಕ ಸುಖ-ಭೋಗಗಳನ್ನು ತೊರೆದು ಮೋಕ್ಷ ಸಾಧನೆ ಮಾಡಬೇಕಾದರೆ ಮೊದಲು ಶಿವನನ್ನು ಮನದಲ್ಲಿ ಆರಾಧಿಸಬೇಕು. ಈ ಶಿವನ ಕಾರುಣ್ಯಕ್ಕೆ ಪಾತ್ರರಾಗಬೇಕು. ಇದಕ್ಕೆಲ್ಲಾ ಮೂಲ ಕಾರಣವಾದ ಪಂಚೇಂದ್ರಿಯಗಳ ನಿಗ್ರಹ ಹಾಗೂ ಅರಿಷಡ್ವರ್ಗಗಳನ್ನು ತೊರೆಯಬೇಕು. ಹೀಗೆ ಮನದ ಶುಚಿಗಾಗಿ ಶಿವನನ್ನು ಆರಾಧಿಸುವ ಪರಿ ಇಲ್ಲಿ ಕಂಡುಬರುತ್ತದೆ. ಮನುಷ್ಯ ತನ್ನಲ್ಲಿರುವ ಹೀನಗುಣಗಳನ್ನು ತೊರೆದಾಗಲೇ ಶಿವನಿಗೆ ಹತ್ತಿರವಾಗಲು ಸಾಧ್ಯ ಎಂದು ಹೇಳುವ ಈ ಶರಣರುಗಳು ಇಲ್ಲಿ ಮನುಷ್ಯನ ನಡವಳಿಕೆ ಹೇಗಿರಬೇಕು ಎಂಬುದರ ನೀತಿಯನ್ನು ಬೋಧಿಸುತ್ತಾರೆ. ಯಾರನ್ನೂ ನಿಂದಿಸಬಾರದು, ಇಹದಲ್ಲಿ ಮನಸ್ಸಿಗೆ ಬಂದಂತೆ ನಡೆಯಬಾರದು, ಕಳಂಕ ತರುವ ಕೆಲಸ ಮಾಡಬಾರದು, ಕಾಮಮೋಹಾದಿಗಳನ್ನು ಜಹಿಸಬೇಕು. ಇವುಗಳನ್ನೆಲ್ಲ ತೊರೆದು ಶಿವಕಾರುಣ್ಯಕ್ಕೆ ಪಾತ್ರರಾಗಲು, ನಡುವಣ ಕೊಂಡಿಯಾಗಿ ಕೈಹಿಡಿದು ಅನುಗ್ರಹಿಸುವ ಶ್ರೀ ಗುರುವಿನ ರಕ್ಷೆ ಬೇಕು ಎಂದು ಹೇಳುತ್ತಾರೆ. ಹಾಗೆಯೇ ಆ ಗುರುವಿನ ಉಪದೇಶದ ಮೂಲಕ ಮೋಕ್ಷ ಪಡೆಯಬೇಕು. ಈ ಮೋಕ್ಷ ಸಾಧನೆಗೆ ಮೂಲಸಾಧನ ಶಿವನ ಸಹಸ್ರ ನಾಮಸ್ಮರಣೆ. ಶಿವನಾಮ ಜಪಿಸಿದರೆ ಮೋಕ್ಷ ಲಭಿಸುವುದೆಂದು ಈ ಪಂಥದವರ ಪ್ರಬಲ ನಂಬಿಕೆಯಾಗಿದೆ. ಶಿವನಾಮ ಸ್ಮರಣೆಯಿಂದಲೇ ಜಗತ್ತಿನಲ್ಲಿ ಎಲ್ಲವನ್ನು ಗೆಲ್ಲಬಹುದು ಹಾಗೂ ಶೌನಕ, ಸನಕ, ಕಪಿಲ, ಕಣ್ವ, ದಧೀಚ, ಗೌತಮ, ಅಗಸ್ತ್ಯ ಮೊದಲಾದ ಋಷಿ ಮುನಿಗಳಿಗೆ ಫಲ ಸಿಕ್ಕಿರುವುದು ಈ ಶಿವನಾಮ ಸ್ಮರಣೆಯಿಂದಲೆ ಎಂದು ಹೇಳುತ್ತಾರೆ. ಹಾಗೆಯೆ ಈ ಶಿವನಾಮವೇ ಶರಣರಿಗೆ ಕಲ್ಪವೃಕ್ಷವಾಗಿ ಕಂಡುಬಂದಿದೆ ಸಂಸಾರದ ರೋಗಕ್ಕೆ ಸಂಜೀವಿನಿಯಂತೆ ಕೆಲಸ ಮಾಡಿದೆ. ವಿಷಯಾಂತರದ ಯಾತನೆ ತುಂಬಿಕೊಂಡು ಪಾಪಕರ್ಮದ ಕೂಪಗಳೊಳಗೆ ಮುಳುಗಿ ಮನುಷ್ಯ ಕುಲ, ಜಾತಿ, ಮತ, ರೂಪ, ಸಂಪತ್ತು ಇವುಗಳಲ್ಲಿ ಮೋಹಪಟ್ಟು ಬಹಳ ಬಾಧೆಯನ್ನು ಪಡುವ ಸನ್ನಿವೇಶವನ್ನು ಈ ಶರಣರು ವರ್ಣಿಸಿ ಇವುಗಳ ಬಿಡುಗಡೆಗಾಗಿ ಪ್ರತಿಯೊಬ್ಬರು ತನು-ಮನ ಪೂರ್ವಕವಾಗಿ ಶಿವನಾಮಸ್ಮರಣೆ ಮಾಡಿ, ಶಿವನ ಧ್ಯಾನದಲ್ಲಿ ಮುಳುಗಿ ಶಿವನ ಕೃಪೆಗೆ ಪಾತ್ರರಾಗುವ ಪರಿ, ಈ ಶಿವಕಾರುಣ್ಯ ಸ್ಥಲದಲ್ಲಿ ಇಲ್ಲಿ ಬರುವ ಶರಣರ ತತ್ವಪದಗಳಲ್ಲಿ ವ್ಯಕ್ತವಾಗಿದೆ. ಜೀವ ಸಂಭೋಧನಾ ಸ್ಥಲ ಈ ಸ್ಥಲವು ವಹನ ಸಾಹಿತ್ಯದ ಸ್ಥಲಕ್ಕಿಂತ ಭಿನ್ನವಾಗಿದೆ ಅವರ ಸಮಾನತೆಯ ಸಂದೇಶಕ್ಕೆ ವಿರುದ್ಧವಾಗಿ ಇಲ್ಲಿನ ಶರಣರ ನಿಲುವುಗಳು ಕಂಡುಬರುತ್ತದೆ. 'ಮಾಯೆ'ಯ ಪರಿಕಲ್ಪನೆಗೆ ಈ ಶರಣರು ಕೊಟ್ಟ ವ್ಯಾಖ್ಯಾನಗಳು ಈ ಸ್ಥಲದಲ್ಲಿ ಸಿಗುತ್ತದೆ. ಮನದ ಕಾಮ-ಮೋಹಾದಿ ಗುಣಗಳನ್ನು ದೂರ ಮಾಡಲು ಹೊರಟ ಶರಣರು ಮಾಯೆಯನ್ನು ಹೆಣ್ಣಿಗೆ ಹೋಲಿಸಿ ಪ್ರಬಲವಾಗಿ ನಿಂದಿಸುವ ಕೆಲಸ ಮಾಡುತ್ತಾರೆ. ಯಾವ ಪರಿಯಲ್ಲಿ ಸ್ತ್ರೀ ನಿಂದನೆ ಕಂಡುಬರುತ್ತದೆಯೆಂದರೆ ತಾಯಿ ಗರ್ಭ ಪ್ರವೇಶಿಸಿರುವುದೂ ಕೂಡ ಅಸಹ್ಯ ಅಂತಹ ಜನನವನ್ನು ಈ ಶರಣರು ಹೀಯಾಳಿಸುತ್ತಾರೆ. ಸತಿಯ ಕೂಟದಿಂದ ಒದಗುವ ದುಸ್ಥಿತಿಯನ್ನು ಈ ಜೀವ ಸಂಭೋಧನಾ ಸ್ಥಲದಲ್ಲಿ ಪ್ರತಿಯೊಬ್ಬ ಶರಣರು ಕೂಡ ತಿಳಿಸುತ್ತಾರೆ. ಇಂತಹ ಸ್ತ್ರೀಯರ ಕಪಿಮುಷ್ಠಿಯಿಂದ ಬಿಡುಗಡೆಗೋಸ್ಕರ ಶಿವನನ್ನು ಆರಾಧಿಸುತ್ತಾ ಸಾಮಾನ್ಯ ಸ್ತ್ರೀಯನ್ನು ನಿಂದಿಸುತ್ತಾರೆ. ಹಾಗೆಯೇ ಇನ್ನೊಂದು ವೈರುಧ್ಯದ ಸಂಗತಿಯೆಂದರೆ ಈ ಸ್ತ್ರೀಯ ಬಿಡುಗಡೆಗೋಸ್ಕರ ಶಿವನ ಪತ್ನಿಯಾದ ಪಾರ್ವತಿಯನ್ನು ಆರಾಧಿಸುವ ಪರಿ ಇನ್ನೊಂದೆಡೆ ಕಂಡುಬರುತ್ತದೆ. ಇವಳನ್ನು ದೈವತ್ವ ನೆಲೆಯಲ್ಲಿ ಕಾಣುವ ಶರಣರು ತಮ್ಮ ತತ್ವಪದಗಳಲ್ಲಿ ಪಾರ್ವತಿಯ ಗುಣಗಾನ ಮಾಡುವ ಸಂದರ್ಭದಲ್ಲಿ ಮೊದಲು ಹೇಳಿದ ಸ್ತ್ರೀಯ ಅವಗುಣಗಳನ್ನೆಲ್ಲಾ ಗುಣಗಳಾಗಿ ಪರಿವರ್ತಿಸಿ ಕೊಂಡಾಡುತ್ತಾರೆ. ಹಾಗೆಯೇ "ಈ ಜೀವಜಗತ್ತಿನಲ್ಲಿ ಬಾಲೆಯರನ್ನು ಕಂಡು ಸೋಲದಾತನೆ ವಿರಕ್ತ" ಎಂಬ ನಿಲುವು ಪ್ರತಿಯೊಬ್ಬ ಶರಣಲ್ಲೂ ಕಂಡುಬರುತ್ತದೆ. ಮೋಕ್ಷದ ಹಾದಿಯಲ್ಲಿ ಶಿವಕಾರುಣ್ಯವನ್ನು ಪಡೆದ ಮೇಲೆ ಮುಂದಿನ ಹೆಜ್ಜೆಯಾದ ಜೀವಸಂಬೋಧನಾ ಸ್ಥಲ ಎರಡನೆಯದಾಗಿರುತ್ತದೆ. ಇಲ್ಲಿ ಸಾಗುವಾಗ ಪಂಚೇಂದ್ರಿಯಗಳ ನಿಗ್ರಹ ಸಂದರ್ಭದಲ್ಲಿ ತಮ್ಮ ಕೈ ಮೀರಿದ ಶಕ್ತಿಗಳು ಬಂದು ಅವರನ್ನು ಕಾಡಿದಾಗ ವಿರಕ್ತರಾಗಲು ತನು-ಮನಗಳು ಹಂಬಲಿಸುವಾಗ ದೈವತ್ವದ ಹುಡುಕಾಟದಲ್ಲಿ ತೊಡಗಿ ಮನದ ದುರಾಸೆಯನ್ನೆಲ್ಲಾ ದೂರ ಮಾಡುವ ಪರಿ ಈ ಸ್ಥಲದ ತತ್ವಪದಗಳಲ್ಲಿ ಕಂಡುಬರುತ್ತದೆ. ನೀತಿ-ಕ್ರಿಯಾ-ಚರ್ಯ ಸ್ಥಲ ಮೋಕ್ಷ ಮಾರ್ಗದ ಮೂರನೆಯ ಹೆಜ್ಜೆ ಇದಾಗಿದೆ. ಸಾಧಕ ಎಚ್ಚರಿಕೆಯ ಹಾದಿಯಲ್ಲಿ ಸಿದ್ಧಿಯ ಶಿಖರಕ್ಕೇರಲು ಹೊರಟಾಗ ನೈತಿಕ ಜೀವನದ ನಿಷ್ಠೆ ಪ್ರಧಾನವಾಗುತ್ತದೆ. ಹಾಗೆಯೇ ಆಡಂಬರವನ್ನು ಬಿಟ್ಟು ಅಂತರಂಗ- ಬಹಿರಂಗಗಳು ಒಂದಾಗಲು ಹೆಣಗಿದ ಶರಣರ ನಿಲುವುಗಳು ಇಲ್ಲಿ ಕಂಡುಬರುತ್ತದೆ. ಅಂತರಂಗ-ಬಹಿರಂಗಗಳ ಸಮ್ಮಿಲನದಿಂದ ಹೊರಬಂದ ತತ್ವಪದಗಳು ವಿಶಿಷ್ಟವಾಗಿವೆ. ಶಿವಕಾರುಣ್ಯ ಪಡೆದು, ಜೀವ ಪಡುವ ಆಸೆಮೋಹಗಳನ್ನೆಲ್ಲಾ ತಿರಸ್ಕರಿಸಿ, ಜಯಿಸಿ ಮುಂದೆ ನೈತಿಕ ಜೀವನದ ಕಡೆ ನಡೆದು, ಅನುಭವದ ಕಡೆ ಮುಖ ಮಾಡುವ ಶರಣರ ನಿಲುವುಗಳು ಈ ಸ್ಥಲದಲ್ಲಿ ಕಂಡುಬರುತ್ತದೆ. ಇಹದ ಭೋಗ-ಭಾಗ್ಯಗಳಿಗೆ ಆಸೆಪಟ್ಟು ಮುಂದೆ ಸಿಗುವ ಪುಣ್ಯವನ್ನು ಕಳೆದುಕೊಳ್ಳುವ ಮುನ್ನ ಶಿವಭಕ್ತಿಯನ್ನು ಮಾಡಬೇಕು ಎಂಬ ಸಂದೇಶವಿದೆ. ಮೋಕ್ಷ ಬೇಕೆಂಬುವವರು ಅಂತರಂಗ-ಬಹಿರಂಗದಲ್ಲಿ ಸಕಾಮ-ನಿಷ್ಕಾಮ ಎರಡೂ ರೀತಿಯಾಗಿ ಶಿವನನ್ನು

ಭಜಿಸಿದರೆ ಪರಮಾನಂದ ಲಭಿಸುತ್ತದೆ. ಹಾಗೆಯೇ ಶಿವಭಕ್ತಿ ಎಂಬ ಶಕ್ತಿಯ ಮೂಲಕ ಕಾಲವನ್ನು, ಕರ್ಮವನ್ನು, ಮಾಯೆಯನ್ನು ಗೆಲ್ಲಬಹುದು. ಗುರುವಿನ ಪಾದಸೇವೆ, ಶರಣರ ಸಂಗ, ಶಿವನ ಪೂಜೆ, ದಯೆ, ವಿನಯ, ಸಮಯ, ನಿಷ್ಠೆ, ವೈರಾಗ್ಯ, ವಿವೇಕ, ವಿದ್ಯೆ, ಕ್ಷಮೆ, ದಮೆ, ಭಕ್ತಿ ಇವುಗಳ ಬಗ್ಗೆ ಮಹತ್ವಪೂರ್ಣವಾದ ಸಂದೇಶಗಳು ಈ ಸ್ಥಲದಲ್ಲಿ ಸಿಗುತ್ತದೆ. ಅಂತಿಮವಾಗಿ ಈ ಶರಣರು ಈ ಸ್ಥಲದಲ್ಲಿ ನೀತಿಯ ಬಲವಿಲ್ಲದವನಿಗೆ ಜ್ಞಾನವೊಂದರಿಂದಲೇ ಮುಕ್ತಿಯಾಗದು ಎಂಬ ನಿಲುವನ್ನು ತಾಳುತ್ತಾರೆ. ಯೋಗಪ್ರತಿಪಾದನಾ ಸ್ಥಲ ೧೫ನೇ ಶತಮಾನದಲ್ಲಿ ಕಂಡುಬರುವ ಕೈವಲ್ಯ ಸಾಹಿತ್ಯದ ಶರಣರು ವೇದಗಳಲ್ಲಿ ಹೇಳಿರುವ ಯೋಗಗಳ ಮಹತ್ವವನ್ನು ಎತ್ತಿ ಸಾರುತ್ತಾರೆ. ಯೋಗದ ಮೂಲಕ ಶಿವನಲ್ಲಿ ಲೀನವಾಗುವ ಪರಿಯನ್ನು ತಿಳಿಸಿದ್ದಾರೆ. ಪ್ರಸ್ತುತ ಸಂದರ್ಭದ ಪ್ರಾಯೋಗಿಕ ಯೋಗಗಳ ಮಹತ್ವವನ್ನೆಲ್ಲಾ ಅಂದಿನ ಕಾಲದಲ್ಲೇ ಈ ಶರಣರು ತಮ್ಮ ದಿವ್ಯ ದೃಷ್ಟಿಯ ಮೂಲಕ ಗ್ರಹಿಸಿ, ಅನುಸರಿಸಿ ಈ ಜಗತ್ತಿಗೆ ತಮ್ಮ ತತ್ವಪದಗಳ ಮೂಲಕ ಸಾರಿದ್ದಾರೆ. ಮೊದಲ ಮೂರು ಸ್ಥಲಗಳನ್ನು ಅನುಸರಿಸಿ ಬಂದ ಶರಣನ ನಂತರದ ಸ್ಥಿತಿ, ಯೋಗಸ್ಥಿತಿ ಈ ಯೋಗ ಸಾಧನೆಯಲ್ಲಿ ತೊಡಗಿದ ಶರಣ ಮತ್ತೆ ನಾಲ್ಕು ಹಂತಗಳನ್ನು ಕ್ರಮಿಸಬೇಕು. ಮಂತ್ರ ಯೋಗ, ಲಯಯೋಗ, ಹಠಯೋಗ, ರಾಜಯೋಗ ಈ ಮೆಟ್ಟಿಲುಗಳ ಮೂಲಕ ಶಿವಯೋಗದ ತುತ್ತತುದಿಗೇರಲು ಪ್ರಯತ್ನಿಸುವ ಪರಿ ಇಲ್ಲಿ ಕಂಡುಬರುತ್ತದೆ. ಅ. ಮಂತ್ರಯೋಗ ಶಿವಯೋಗದಲ್ಲಿ ತೊಡಗಿದ ಶರಣ ತಮ್ಮೊಳಗಿರುವ ಮಹಾಮಂತ್ರವನ್ನು ಉದಯಕಾಲದಲ್ಲಿ ನಿಷ್ಠೆಯಿಂದ ಜಪಿಸಬೇಕು. "ಓಂ ನಮಃ ಶಿವಾಯ" ಮಂತ್ರವೇ ಇಲ್ಲಿ ಮೂಲಮಂತ್ರವಾಗುತ್ತದೆ. ಇದನ್ನು ಶಿವನಲ್ಲಿ ಪ್ರೀತಿ ತುಂಬಿದ ಭಕ್ತಿಯನ್ನಿಟ್ಟು ಜಪಿಸಿದರೆ ತನು-ಮನಗಳನ್ನು ಈ ಮಂತ್ರದ ಮೂಲಕ

ತಲ್ಲೀನಗೊಳಿಸಿದರೆ ಮುಕ್ತಿ ಸಿದ್ಧಿಯಾಗುತ್ತದೆ ಎಂಬುದು ಇವರ ಮತ ಹಾಗೂ ಪ್ರತಿಯೊಬ್ಬ ಶರಣ ಆತ್ಮದಲ್ಲಿ ಭಗವಂತನನ್ನು ಕಾಣಲು ನಾಲಿಗೆಯ ಮೂಲಕ ಮಂತ್ರ ಜಪಿಸಿ ತನ್ನ ತನು-ಮನವನ್ನು ಏಕಾಗ್ರತೆಯೆಡೆಗೆ ಕೊಂಡೊಯ್ಯುತ್ತಾನೆ. ಮಂತ್ರ ಸಿದ್ಧಿಯ ಫಲ ದೊರೆಯುವವರೆಗೂ ಈ ಯೋಗದ ಮಹತ್ವ ಕಾಣುವುದಿಲ್ಲ.

ಲಯಯೋಗ ಈ ಯೋಗದಲ್ಲಿ ಶಿವಧ್ಯಾನದಲ್ಲಿ ಮುಳುಗಿದ ಶರಣ ತನ್ನಲ್ಲಿರುವ ಎಲ್ಲಾ ಆಸೆ-ಆಕಾಂಕ್ಷೆ ಹಾಗೂ ಗುಣಾವಗುಣಗಳನ್ನು ಲಯಗೊಳಿಸಿಕೊಳ್ಳಬೇಕು. ಮನಸ್ಸು ಮದ, ಮೋಹ, ಅರಿಷಡ್ವರ್ಗಗಳು, ನಿದ್ರಾದಿಗಳನ್ನು ತ್ಯಜಿಸಬೇಕು. ವಿಷಯಾದಿಗಳು ಚಂಚಲ ವ್ಯಕ್ತಪಡಿಸಿದಾಗ ಸಂಯಮದಿಂದ ನಡೆದುಕೊಳ್ಳಬೇಕು. ಕಷ್ಟವಾದಾಗ ಶಿವಧ್ಯಾನದಲ್ಲಿ ತೊಡಗಬೇಕು. ಪಡೆದು, ಜಪಿಸಿ, ನೋಡಿ, ಕೇಳಿ, ನೆನೆದು ಶಿವನೊಡಗೂಡಿದರೆ ಮುಕ್ತಿ ಪಡೆಯಲು ಸಾಧ್ಯವಾಗುತ್ತದೆ. ಒಂದು ಕ್ಷಣವಾದರೂ ಕೂಡ ಶಿವನನ್ನು ನೆನೆದರೆ ಮೋಕ್ಷ ಸಿಗುತ್ತದೆ. ಇಲ್ಲಿ ನಾದ-ಬಿಂದು ಬೆರಸಿ ಮನೋಲಯವಾಗುವುದೇ ಇದರ ಗುರಿ. ಇಲ್ಲಿ ಮನಸ್ಸೇ ಯೋಗದ ಕೇಂದ್ರಸ್ಥಾನ. ಮನದ ವಿಕಾರತೆ ನಾಶವಾಗುವವರೆಗೆ ತಾಳ್ಮೆ, ಸಂಯಮದಿಂದ ಮನಸ್ಸನ್ನು ನಿಯಂತ್ರಿಸಬೇಕು. ಶಿವನೆಡೆಗೆ ಮನಸ್ಸನ್ನು ವಾಲಿಸಬೇಕು. ಹಠಯೋಗ ಇಲ್ಲಿ ಶರಣ ಅಂತರಂಗಕ್ಕೆ ಒತ್ತಡ ಕೊಡುವ ಬದಲು ಬಹಿರಂಗಕ್ಕೆ ಬೆಲೆಕೊಟ್ಟು ನಿಯಂತ್ರಿಸಬೇಕಾಗುತ್ತದೆ. ಪ್ರಧಾನವಾಗಿ ನಿರ್ಗುಣ ಅಷ್ಟಾಂಗಗಳು, ಆಸನಗಳು, ಬಂದಗಳಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಬಹಿರಂಗದಲ್ಲಿ ದೇಹವನ್ನು ದಂಡಿಸುವ ಮೂಲಕ ದೈಹಿಕವಾದ ಸಾಧನೆಯಲ್ಲಿ ತೊಡಗಿ, ಅದರಿಂದ ದೊರೆಯುವ ಸಿದ್ಧಿಗಳು ಪ್ರಮುಖವಾಗಿದೆ. ಇದರಲ್ಲಿ ಪ್ರಾಣ ಅಪಾನ ವಾಯುಗಳನ್ನು ಸೋಲಿಸಿ ಪ್ರಾಣದ ಶಕ್ತಿಯ ಸಾಮರ್ಥ್ಯವನ್ನು ಕಾಣಲಾಗುತ್ತದೆ. ಭಗವಂತನ ಸಾಕ್ಷಾತ್ಕಾರವಾಗುವವರೆಗೆ ಹಠ ಸಾಧಿಸಿ ತನುಮನ-ಧನಗಳನ್ನು ನಿಯಂತ್ರಿಸಿ ದೇಹ-ಮನಸ್ಸುಗಳನ್ನು ದಂಡಿಸುವ ಪರಿ ಇಲ್ಲಿದೆ. ಹಠದ ಮೂಲಕವೇ ಶಿವನನ್ನು ಕಾಣುವ ಶರಣರ ಚಿತ್ರಣ ಇಲ್ಲಿ ವ್ಯಕ್ತವಾಗಿದೆ. ರಾಜಯೋಗ ಯೋಗಿಯ ಸ್ಥಿತಿಯ ಅಂತಿಮ ಘಟ್ಟ ಯೋಗಿಯಾದವನಿಗಲ್ಲದೆ ಮಿಕ್ಕವರು ಈ ರಾಜಯೋಗವನ್ನು ತಲುಪಲು ಸಾಧ್ಯವಿಲ್ಲ. ಹಠಯೋಗದ ಮುಂದುವರಿದ ರೂಪ ಇದು ದೇಹ ಮತ್ತು ಮನಸ್ಸುಗಳ ಗಡಿದಾಟಿ ಅನುಭವದ ಆಳಕ್ಕೆ ಇಳಿಯುವ ಸ್ಥಿತಿಯಾಗಿದೆ. ಬಹಿರ್ಲಕ್ಷ್ಯ, ಮದ್ಯಲಕ್ಷ್ಯ ಪ್ರಕಾರ ಪಂಚಭೂತಗಳ ಪಂಚೀಕರಣದಿಂದ ಹುಟ್ಟಿದ ಪಂಚವಿಂಶತಿ ತತ್ವ ಅರಿತು ಅಲ್ಲಗಳೆದು ನಿಜ ಪದ ಸುಖವನರಿಯುವುದು ಇಲ್ಲಿ ಆಧ್ಯಾತ್ಮಿಕ ಅನುಭವ ಲೋಕದೊಳಗೆ ಭಕ್ತ-ಭಗವಂತನಲ್ಲಿ ಐಕ್ಯವಾದ ಸ್ಥಿತಿಯಲ್ಲಿ ಲಿಂಗಾರ್ಚನೆ, ಭಸ್ಮ, ರುದ್ರಾಕ್ಷಿ, ಪಂಚಾಕ್ಷರಿ ಜಪ, ಇಷ್ಟಲಿಂಗ, ಕರಣಾತ್ಮಕ, ಪ್ರಸಾದ, ಭಕ್ತ ಇತ್ಯಾದಿ ರೂಪಗಳು ಅಂತಿಮ ಹಂತದಲ್ಲಿ ಕಂಡುಬರುತ್ತದೆ. ಜ್ಞಾನಪ್ರತಿಪಾದನ ಸ್ಥಲ ಭಕ್ತಿ ಅಂಟಿಕೊಂಡು ಬಂದ, ಶಿವಕಾರುಣ್ಯ ಸ್ಥಲದಿಂದ ಬೆಳೆದು ಬಂದ ಸಾಧಕನ ಬದುಕಲ್ಲಿ ಇದುವರೆಗಿನ ಕರ್ಮಗಳೆಲ್ಲ ಕೇವಲ ಜ್ಞಾನದಲ್ಲಿ ಪರ್ಯಾವಸಾನವಾಗುತ್ತವೆ. ಭೌದ್ಧಿಕವಾಗಿ ಕಂಡುಕೊಂಡ ಸತ್ಯ ತಾನೇ ಆಗುತ್ತಾನೆ. ಶಿವಯೋಗದ ಸಿದ್ಧಿಯ ಫಲ ಲಭಿಸಬೇಕಾದರೆ ಜ್ಞಾನದ ಪ್ರಭಾವ ಬಹಳ ಮುಖ್ಯ. ಜ್ಞಾನವಿಲ್ಲದಿದ್ದರೆ ಇದು ಶುಷ್ಕಕಾಮವಾಗುತ್ತದೆ. ಜೀವ ತನ್ನ ಆಧ್ಯಾತ್ಮಿಕ ಯಾತ್ರೆಯಲ್ಲಿ ಏರುವ ವಿವಿಧ ಹಂತಗಳನ್ನು ಈ ಸ್ಥಲ ಅರ್ಥವತ್ತಾಗಿ ಸೂಚಿಸುತ್ತದೆ. ಕೈವಲ್ಯ ಸ್ಥಿತಿಗೇರಲು ಶರಣನಿಗೆ ಜ್ಞಾನ ಮುಖ್ಯವಾಗುತ್ತದೆ. ನಿತ್ಯಕರ್ಮದಿಂದ ಧರ್ಮಪ್ರಾಪ್ತಿಯಾಗುತ್ತದೆ.

ಆ ಧರ್ಮದಿಂದ ಪಾಪನಿವಾರಣೆಯಾಗುತ್ತದೆ. ಪಾಪಕರ್ಮ ನಿವಾರಣೆಯಿಂದ ಚಿತ್ತನಿರ್ಮಲವಾಗುತ್ತದೆ. ಇದರಿಂದ ಸಂಸಾರದ ಅವಲಕ್ಷಣ ಮನದಟ್ಟಾಗಿ ಇದರಿಂದ ವೈರಾಗ್ಯ ದೊರೆಯುತ್ತದೆ. ನಂತರ ವೈರಾಗ್ಯದಿಂದ ಮೋಕ್ಷ ದೊರೆತು ಜ್ಞಾನೋತ್ಕರ್ಷವಾಗುತ್ತದೆ. ಈ ಸ್ಥಲದಲ್ಲಿ ಶರಣರ ನಿಲುವೆಲ್ಲಾ ಒಂದೇ ಆಗಿದೆ. "ಮುಕ್ತಿ ಪಡೆಯಲು ನೀನು ಕರ್ಮದ ಬಲೆಗೆ ಬೀಳಬೇಡ, ಜ್ಞಾನದ ಹಾದಿಯನ್ನು ಅವಲಂಬಿಸು" ಎಂದು ಹೇಳುತ್ತಾರೆ. ಹಾಗೆಯೇ ಜ್ಞಾನವೇ ಮೋಕ್ಷದ ತುತ್ತತುದಿ ಎಂದು ಸಾರುತ್ತಾರೆ. ಶಿವಯೋಗದ ಹಾದಿಯಲ್ಲಿ ಜ್ಞಾನದ ತುತ್ತತುದಿಯನ್ನು ಏರಿದಾಗ ಮೊದಲ ಹಂತದಲ್ಲಿ ಈ ಶರಣರು ತ್ಯಜಿಸಿದ ಕೆಲವು ನಿಯಮಗಳು, ವಿರೋಧಿಸಿದ ವಸ್ತುಗಳು ಎದುರಿಗಿದ್ದರೂ ಕೂಡ ಅವುಗಳ ಮೇಲೆ ಮೋಹವಿಲ್ಲದೆ, ಅಸ್ಪೃಶ್ಯತೆ ಇಲ್ಲದೆ ಅವುಗಳೊಂದಿಗೆ ಒಡನಾಟವಿಟ್ಟುಕೊಳ್ಳಬಹುದೆಂದು ಶರಣನಿಗೆ ಈ ಜ್ಞಾನದ ಪ್ರತಿಪಾದನ ಸ್ಥಲದ ಹಂತದಲ್ಲಿ ತಿಳಿಯುತ್ತದೆ. ಶರಣ ಈ ಹಂತದಲ್ಲಿ ಭಕ್ತಿಯಲ್ಲಿ ಮುಪ್ಪಿನಾವಸ್ಥೆಯಲ್ಲಿರುತ್ತಾನೆ. ಒಳಿತು ಕೆಡುಕುಗಳ ವಿವೇಚಾನಾಶಕ್ತಿ ಅಗಾಧವಾಗಿರುತ್ತದೆ. ವಿಶಾಲ ಮನೋಭಾವ ಆದಿಯಲ್ಲಿ ಇದ್ದ ಆರ್ಭಟ ಆಕ್ರೋಶಗಳನ್ನು ತಣ್ಣಗಾಗಿ ಶಾಂತ ಸ್ವರೂಪಿಯಾಗಿ, ಕರುಣಾಮೂರ್ತಿಯಾಗಿ, ಶಿವಸ್ವರೂಪಿಯಾಗುವ ಸ್ಥಿತಿಯು ಇಲ್ಲಿ ವ್ಯಕ್ತವಾಗಿದೆ. ಕನ್ನಡ ಕೈವಲ್ಯ ಸಾಹಿತ್ಯದಲ್ಲಿ ಪ್ರತಿಯೊಬ್ಬ ಶರಣರೂ ಕೂಡ ಈ ಐದು ಸ್ಥಲಗಳ ಹಂತಗಳನ್ನು ದಾಟಿದ ಮೇಲೆ ಈ ಶರಣರಿಗೆ ಸಮಾಜದಲ್ಲಿ ಸಿಕ್ಕ ಸ್ಥಾನವೆಂದರೆ ಆರಾಧ್ಯದೈವದ ಪಟ್ಟ, ಮಠಾಧಿಪತಿಗಳಾಗುತ್ತಾರೆ. ಜನಸಾಗರವೇ ಇವರ ಆಧ್ಯಾತ್ಮಿಕ ಶಕ್ತಿಗೆ ಶರಣು ಹೋಗಿ, ಈ ಶರಣರೆಡೆ ಮುಖ ಮಾಡಿರುವುದನ್ನು ನಾವು ಚರಿತ್ರೆಯಲ್ಲಿ ಕಾಣಬಹುದು. ಒಟ್ಟಾರೆ ಕೈವಲ್ಯ ಸಾಹಿತ್ಯದಲ್ಲಿ ಬಂದಿರುವ ಈ ಸ್ಥಲಗಳ ವಿವೇಚನೆ ವಿಭಿನ್ನ ಹಾಗೂ ವಿಶಿಷ್ಟವಾಗಿದೆ. ಪರಮಾತ್ಮನ ಉಪಾಸನೆಯಲ್ಲಿ ತೊಡಗಿದ ಶರಣರು ಆತ್ಮಸಾಕ್ಷಾತ್ಕಾರದ ಹುಡುಕಾಟದಲ್ಲಿ ಕರ್ಮ, ಭಕ್ತಿ, ವೈರಾಗ್ಯ, ಯೋಗ, ಅನುಭವ ಈ ಹಂತಗಳನ್ನು ಕ್ರಮಿಸುವ ಪರಿ ಈ ಸ್ಥಲಗಳಲ್ಲಿ ಕಂಡುಬರುತ್ತದೆ. ಹಾಗೆಯೇ ಇವರು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷಿ, ಮಂತ್ರ ಇಂತಹ ಅಷ್ಟಾವರಣಗಳ ಬಗೆಗಿನ ನಿಲುವುಗಳು ವಚನಸಾಹಿತ್ಯಕ್ಕಿಂತ ಭಿನ್ನವಾಗಿ ಮೂಡಿಬಂದಿದೆ. ಈ ಸ್ಥಲಗಳಲ್ಲಿ ಶರಣ ವಿವೇಚನೆ ಭಕ್ತಿ ಪ್ರಧಾನವೂ ಆಗಿದೆ. ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ, ಲಿಂಗಾಚಾರ ಎಂಬ ಪಂಚಾಚಾರದ ಒಳಗಡೆ ನೈತಿಕ ಸಾಧನೆಯ ನಿಷ್ಠೆ ಎದ್ದು ಕಾಣುತ್ತದೆ. ಕನ್ನಡ ಕೈವಲ್ಯದ ಸಾಹಿತ್ಯದೊಳಗೆ ಶರಣ ಪರಂಪರೆ ತತ್ವಪದಗಳಲ್ಲಿ ಮುಖ್ಯವಾಗಿ ವೇದಗಳ ಪ್ರಭಾವ, ಉಪನಿಷತ್ತು, ಮನಸ್ಥಿತಿ ಮುಂತಾದ ದಾರ್ಶನಿಕರ ಧರ್ಮಗ್ರಂಥಗಳ ಸಾರ ಕಂಡುಬರುತ್ತದೆ. ಅಲ್ಲದೆ ಜೈನರ ಹಿಂಸೆ, ಬೌದ್ಧರ ಸಮತಾವಾದ, ವಚನ ಸಾಹಿತ್ಯದ ಶರಣರ ದಯಾಪರತೆ, ದಾಸರ ಹರಿಪಾರಮ್ಯ ಎಲ್ಲವೂ ಅಡಗಿ ಭಿನ್ನ ರೂಪ ಹೊಸಶಿಲೆಯೊಂದು ಸೃಷ್ಟಿಯಾದಂತಿದೆ. ಒಟ್ಟಾರೆ ತನುಮನ ಧನಗಳನ್ನು ಪರಶಿವ ಹಾಗೂ ಅವನ ಶರಣರಿಗಾಗಿ ಮೀಸಲಿಟ್ಟ ಸ್ಥಾನ ಇಲ್ಲಿ ವ್ಯಕ್ತವಾಗಿದೆ.

## ಅಡಿ ಟಿಪ್ಪಣಿ


೧. ಪ್ರೊ. ಸ.ಸ. ಮಾಳವಾಡ: "ವೀರಶೈವ ಪಥ" ಪುಟ ಸಂಖ್ಯೆ ೭೭. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು. ೨೦೦೬

೨. ಡಾ. ಹೆಚ್. ತಿಪ್ಪೆರುದ್ರಸ್ವಾಮಿ. "ಕೈವಲ್ಯ ಸಾಹಿತ್ಯ" ಪುಟ ಸಂಖ್ಯೆ ೧೧. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು. ೨೦೦೩ ಪರಾಮರ್ಶನಾ ಗ್ರಂಥಗಳು ೧. ಡಾ.ಶೈಲಜಾ ಉಡಚಣ : "ವಚನಗಳಲ್ಲಿ ಮಾಯೆ ಸಂಸಾರ" ಶ್ರೀ ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು. ೨೦೦೩ ೨. ಡಾ. ಎಲ್. ಬಸವರಾಜು : "ನಿಜಗುಣ ಶಿವಯೋಗಿಯ ತತ್ವದರ್ಶನ" ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು. ೨೦೦೪.

೩. ಶ್ರೀಮತಿ ವಿಶಾಲಾಕ್ಷಾಂಬತಾಯಿ, ಪಂ.ವೇ.ತೋಟಪ್ಪಯ್ಯ ಶಾಸ್ತ್ರೀಜಿ ಖಟಣಜಡಿಟಚಿಣುಠಟಚಿಟ ಎಠಣಡಿಟಚಿಟ ಠಜ ಏಚಿಟಟಚಿಜಚಿ ಖಿಜಜಚಿಡಿಛಿ ಹಿರೇಮಠ : "ಸಟೀಕಾ ಕೈವಲ್ಯ ಕಲ್ಪವಲ್ಲರಿ" ಶ್ರೀ ತೋಂಟಾದಾರ್ಯ ಬುಕ್ ಡಿಪೋ, ಗದಗ. ೪. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸಂ : "ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು",

೫. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು. ೧೯೯೮ ಲಿಂ. ಪೂ. ಶಿ. ಶಿ. ಬಸವನಾಳ ಸಂ : "ಕೈವಲ್ಯ ದರ್ಪಣ" ಶ್ರೀ ಮುರುಘಾಮಠ, ಮೃತ್ಯುಂಜಯ ನಗರ, ಧಾರವಾಡ. ೧೯೯೦ ೬. ಶ್ರೀ ಡಿ. ಎಸ್. ಕುಮಾರ ಸಂ: "ಶ್ರೀ ಕೂಡ್ಲೂರು ಬಸವಲಿಂಗರ ತತ್ವ ಪದಗಳು" ಭಾಗ–೩